(ಅ) ಹಾಗಿಲ್ಲದಿದ್ದಲ್ಲಿ ಸದರಿ ಕೆಲಸವು ಯಾವಾಗ ಪ್ರಾರಂಭಿಸಲಾಗುವುದು ?

(ಇ) ಸದರಿ ಕೆಲಸವನ್ನು ಮುಗಿಸಲು ಎಷ್ಟು ಸಮಯ ಬೇಕಾಗುತ್ತದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಇನ್ನೂ ಇಲ್ಲ.

(ಆ) ೧೯೮೩-೮೪ರ ಸಾಲಿನಲ್ಲಿ ತೆಗೆದುಕೊಳ್ಳಲಾಗುವುದು.

(ಇ) ಹಣಕಾಸಿನ ಲಭ್ಯತೆಯನ್ನವಲಂಬಿಸಿ, ಸುಮಾರು ಮೂರು ವರ್ಷಗಳು.

ಶ್ರೀ ಬಿ. ಹೆಚ್. ಯಂಕಾನಾಯ್ಕ.—ಈ ವರ್ಷದಲ್ಲಿ ಇದನ್ನು ಮುಗಿಸುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಈ ಕೆಲಸಕ್ಕೆ ೪೦ ಲಕ್ಷ ರೂಪಾಯಿ ಒಂದು ಎಸ್ಟಿಮೇಟ್ ಆಗಿತ್ತು. ೧೯೮೦ರಲ್ಲಿ ಅದಕ್ಕೆ ಆಡಳಿತಾತ್ಮಕ ಮಂಜೂರಾತಿ ಕೊಟ್ಟಿದ್ದಾರೆ. ಆಗಲೆ ಅದರ ಅಂದಾಜು ೪೦ ಲಕ್ಷದಿಂದ ೮೦ ಲಕ್ಷ ರೂಪಾಯಿ ಆಗಿದೆ. ಮೂರು ಕೆರೆಗಳು ನೀರು ತುಂಬಿ ಬಲದಂಡೆ ನಾಲೆಯಲ್ಲಿ ಹೋಗಬೇಕಾದರೆ ೭೭೮೮ ಎಕರೆ ನೀರಾವರಿ ಆಗುತ್ತದೆ. ಕೊನೇ ಹಂತದಲ್ಲಿರುವವರಿಗೆ ನೀರು ಬರುವುದಿಲ್ಲ. ರೈತರ ಕಷ್ಟ ಏನಿದೆ ಅದನ್ನು ಪರಿಹಾರ ಮಾಡಲಿಕ್ಕೆ ಬೈಪಾಸ್ ಕಾಲುವೆ ಮಾಡಬೇಕೆಂದು ನಿರ್ಣಯ ಮಾಡಿ ೮೦ ಲಕ್ಷ ರೂಪಾಯಿ ಅಂದಾಜಿನಲ್ಲಿ ಕೆಲಸ ಮಾಡುವುದಕ್ಕೆ ನಿರ್ಣಯ ಮಾಡಿದ್ದೇವೆ ಈ ವರ್ಷ ಕೆಲಸ ಪ್ರಾರಂಭ ಮಾಡುತ್ತೇವೆ. ಇದನ್ನು ಸುಮಾರು ಮೂರು ವರ್ಷಗಳಲ್ಲಿ ಮುಗಿಸುವ ಕಾರ್ಯಕ್ರಮ ಇದೆ.

ಗುಲ್ಬರ್ಗಾ ಜಿಲ್ಲೆಯ ರಸ್ತೆಗಳ ದುಸ್ಥಿತಿ ಬಗ್ಗೆ

೧೮೯. ಶ್ರೀ ಶಾನಪ್ಪ ಬೀಮ್‌ಷಾ (ಶಹಬಾದ್).—ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಸಣ್ಣೂರ ಮಾರ್ಗವಾಗಿ ಹೋಗುವ ಶಹಾಬಾದ್ ಗುಲ್ಬರ್ಗ ರಸ್ತೆ, ಶಹಬಾದ್ ಮಾರ್ಗವಾಗಿ ಹೋಗುವ ಗುಲ್ಬರ್ಗ--ರಾಯಚೂರು ರಸ್ತೆ ಶಹಾಬಾದ್ ಭೀಮಾರೋಡ್ ಈ ರಸ್ತೆಗಳು ತೀರಾ ಹದಗೆಟ್ಟ ಪರಿಸ್ಥಿತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಆ) ಹಾಗಾದರೆ ಈ ರಸ್ತೆಗಳನ್ನು ದುರಸ್ತಿ ಮಾಡಲು ಮತ್ತು ಟಾರು ಹಾಕಿಸಲು ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು ? ಮತ್ತು ಇದಕ್ಕಾಗಿ ಎಷ್ಟು ಹಣವನ್ನು ಒದಗಿಸಲಾಗಿದೆ.

ಶ್ರೀ ಹೆಚ್. ಡಿ. ದೇವೇಗೌಡ.-- (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).-

(ಅ) ರಸ್ತೆಗಳು ತೀರಾ ಹದಗೆಟ್ಟಿಲ್ಲ.

(ಆ) ಸಣ್ಣೂರ ಮಾರ್ಗವಾಗಿ ಹೋಗುವ ಶಹಬಾದ್ ಗುಲ್ಬರ್ಗ ರಸ್ತೆಯನ್ನು ಹಾಗೂ ಶಹಾಬಾದ್ ಬೀಮಾರೋಡ್ ರಸ್ತೆಯನ್ನು ಆರ್ಥಿಕ ಪರಿಸ್ಥಿತಿಗನುಗುಣವಾಗಿ ಅಭಿವೃದ್ಧಿ ಮಾಡಲಾಗುವುದು.

ಶಹಾಬಾದ್--ರಾವೂರು ಮತ್ತು ಯಾದಗಿರಿ ಮೂಲಕ ಹೋಗುವ ಗುಲ್ಬರ್ಗ ರಾಯಚೂರು ರಸ್ತೆಯ ೩೫ ಕೀ. ಮೀ. ಉದ್ದವನ್ನು ದುರಸ್ತಿಗೊಳಿಸಲು ಈಗಾಗಲೇ ೩೩.೬೦ ಲಕ್ಷ ರೂ.ಗಳ ಅಂದಾಜಿನಲ್ಲಿ ತೆಗೆದುಕೊಳ್ಳಲಾಗಿದೆ. ಇನ್ನುಳಿದ ರಸ್ತೆಯನ್ನು ದುರಸ್ತಿ ಮಾಡಲು ಆರ್ಥಿಕ ಪರಿಸ್ಥಿತಿಗನುಗುಣವಾಗಿ ತೆಗೆದುಕೊಳ್ಳಲಾಗುವುದು.

ಶ್ರೀ ಕೆ. ಬಿ. ಶಾಣಪ್ಪ.--ನಮ್ಮಲ್ಲಿ ಎರಡು ರಸ್ತೆಗಳು ಇವೆ. ಗುಲ್ಬರ್ಗ ರಾಯಚೂರು ಶಹಾಬಾದ್ ಕಚ್ಚಾ ರೋಡ್ ಇದೆ. ಗುಲ್ಬರ್ಗ ಸಣ್ಣೂರ್ ಶಹಾಬಾದ್ ಟಾರ್ ರೋಡ್ ಇದೆ. ಈಗ ಹಣದ ಕೊರತೆ ಹೇಳಿದ್ದೀರಿ. ಟಾರ್ ರೋಡ್ ಹದಗೆಟ್ಟಿರುವ ಬಗ್ಗೆ ತಮ್ಮಲ್ಲಿ ಪೂರ್ತಿ ರಿಪೋರ್ಟ್ ಇದೆಯೇ.

ಶ್ರೀ ಹೆಚ್. ಡಿ. ದೇವೇಗೌಡ.--ಗುಲ್ಬರ್ಗದಿಂದ ರಾಯಚೂರ್‌ಗೆ ೧೨೭ ಕಿಲೋಮೀಟರ್ ಇದೆ. ಅದಕ್ಕೆ ಸಂಬಂಧಿಸಿದಂತೆ ೪೫ ಲಕ್ಷ ರೂಪಾಯಿ ಬೇಕಾಗುತ್ತದೆಂದು ಅಭಿಪ್ರಾಯಪಡಲಾಗಿದೆ. ಆದರೆ ಈಗ ನಾವು ತೆಗೆದುಕೊಂಡಿರತಕ್ಕದ್ದು ೩೫ ಕಿಲೋಮೀಟರ್ ರಸ್ತೆ. ೩೫.೬೦ ಲಕ್ಷ ರೂಪಾಯಿ ಕೊಡಬೇಕೆಂದು ನಿರ್ಣಯ ಮಾಡಿ ಆ ಕೆಲಸ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅದನ್ನು ಮಾಡುತ್ತೇವೆ. ಬಾಕಿ ಉಳಿದ ಎರಡು ರಸ್ತೆಗೆ ಹಣದ ಕೊರತೆ ಇದೆ. ನಾರ್‌ಮಲ್ ಗ್ರಾಂಟ್ಸ್‌ನಲ್ಲಿ ಕೆಲವು ಭಾಗ ಮಾಡಲಿಕ್ಕೆ ಈ ವರ್ಷ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಬಿ. ಶಾಣಪ್ಪ.--ಶಹಾಬಾದ್ ನಲ್ಲಿ ಎರಡು ಮೂರು ಇಂಡಸ್ಟ್ರೀಸ್ ಇವೆ, ಆ ರಸ್ತೆಯೇ ಕೇಂದ್ರ ಬಿಂದು. ಅಲ್ಲಿ ಸೀಮೆಂಟ್ ಟ್ರಾನ್ಸ್‌ಪೋರ್ಟ್ ಆಗುತ್ತದೆ, ಬಾಯ್ಲರ್ ಟ್ರಾನ್ಸ್‌ಪೋರ್ಟ್ ಆಗುತ್ತದೆ, ಅದು ಸುಮಾರು ೫೦ ಟನ್ ವೆಹಿಕಲ್ಸ್ ಓಡಾಡತಕ್ಕ ರಸ್ತೆ. ಆ ರಸ್ತೆ ರಿಪೇರಿ ಮಾಡ ಬೇಕೆಂದು ಅನೇಕ ಸಾರಿ ಕೇಳಿದರೂ ಆಗಿಲ್ಲ. ಗುಲ್ಬರ್ಗ ರಾಯಚೂರು ರಸ್ತೆಗೆ ೩೫.೬೦ ಲಕ್ಷ ರೂಪಾಯಿ ಖರ್ಚು ಮಾಡುತ್ತೇವೆಂದು ಹೇಳುತ್ತಿದ್ದೀರಿ. ಶಹಾಬಾದ್ ರೋಡ್ ಕಚ್ಚಾರೋಡ್ ಇನೆ, ಅಲ್ಲಿ ಟಾರ್ ರೋಡ್ ಮಾಡಲಿಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.--ಎಲ್ಲಾ ಒಂದೇ ಸಾರಿ ಮಾಡಲಿಕ್ಕೆ ಶಕ್ತಿ ಇಲ್ಲದಿದ್ದರಿಂದ, ನಾರಮಲ್ ಗ್ರಾಂಟ್ಸ್‌ನಲ್ಲಿ ಹಣ ಕೊಟ್ಟು ಹಂತಹಂತವಾಗಿ ಕೆಲಸ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಬಿ. ಶಾಣಪ್ಪ.--ಇಡೀ ಕರ್ನಾಟಕದಲ್ಲೇ ಶಹಾಬಾದ್ ರೋಡ್‌ಗಳು ಹಾಳಾಗಿವೆ ಎನ್ನುವುದನ್ನು ತಮ್ಮ ಅಧಿಕಾರಿಗಳೇ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಅಲ್ಲಿಗೆ ಹೆಚ್ಚು ಹಣ ಕೊಟ್ಟು ಸರಿಯಾದ ರಸ್ತೆ ಮಾಡಿಕೊಡುವ ಭರವಸೆ ಕೊಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.--ಮಾನ್ಯ ಸದಸ್ಯರ ತೀವ್ರತೆ ಅರ್ಥಮಾಡಿಕೊಂಡಿದ್ದೇನೆ. ಈಗಾಗಲೇ ಅವರ ಕ್ಷೇತ್ರಕ್ಕೆ ಹಣ ಒದಗಿಸಿ ಬಡ್ಜೆಟ್‌ನಲ್ಲಿ ಕೆಲವನ್ನು ಸೇರಿಸಿದ್ದೇವೆ.

ಶ್ರೀ ಹೆಚ್. ಡಿ. ದೇವೇಗೌಡ.--ಈಗಾಗಲೇ ನಾನು ಪ್ರತಿಯೊಂದು ಕ್ಷೇತ್ರಕ್ಕೂ ೫ ಲಕ್ಷ ರೂ.ಗೆ. ಕಡಿಮೆ ಇಲ್ಲದಂತೆ ಹಣವನ್ನು ಕೊಡುತ್ತಿದ್ದೇವೆಂದು ಹೇಳಿದ್ದೇನೆ. ಮಾನ್ಯ ಸದಸ್ಯರು ಹೇಳಿರತಕ್ಕ ರಸ್ತೆಗಳನ್ನೂ ಕೂಡ ಸೇರಿಸಿದ್ದೇವೆ. ಈ ರಸ್ತೆಗಳು ತೀರಾ ಕೆಟ್ಟಿವೆಯೆಂದು ಹೇಳುತ್ತಿದ್ದೀರಿ. ಇಲಾಖೆ ಇಟ್ಟುಕೊಂಡಿರತಕ್ಕ ನಾರ್ಮಲ್ ಗ್ರಾಂಟ್‌ನಲ್ಲಿ ಹಂತಹಂತವಾಗಿ ಹಣವನ್ನೊದಗಿಸಿ ಕೆಲಸ ಮಾಡಿಸುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.--ತಮಗೆ ಗೊತ್ತಿರುವಂತೆ ಗುಲ್ಬರ್ಗಾದಿಂದ ಶಹಬಾದ್ ಮಂತ್ತು ಅಲ್ಲಿಂದ ಯಾದ್ಗೀರ್ ಮಾರ್ಗವಾಗಿ ರಾಯಚೂರಿಗೆ ಹೋಗುವುದಕ್ಕೆ ಬಹಳ ಹತ್ತಿರದ ದಾರಿ ಇದು. ಕಳೆದ ಸಾರಿ ೩೦ ಲಕ್ಷ ರೂ. ಸ್ಪೆಷಲ್ ಗ್ರಾಂಟ್ ಕೊಟ್ಟಿರಬಹುದು. ಗುಲ್ಬರ್ಗಾದಲ್ಲಿ ಕ್ಯಾಬಿನೆಟ್ ಸಭೆ ನಡೆದಾಗ ಅಲ್ಲಿ ಇದರ ಬಗ್ಗೆ ಒಂದು ಡಿಸಿಷನ್ ತೆಗೆದುಕೊಂಡಿದ್ದರು. ಇದಕ್ಕೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೂಡ ಕೊಟ್ಟಿದೆ. ಕೇವಲ ಶಹಬಾದ್‌ವರೆಗೆ ಮಾತ್ರ ಸ್ಯಾಂಕ್ಷನ್ ಕೊಟ್ಟಿತ್ತು. ಮುಂದೆ ಯಾದ್ಗೀರ್ ಮೂಲಕ ರಾಯಚೂರುವರೆಗೆ ಸುಮಾರು ೭೦ ಕಿಲೋ ಮೀಟರ್ ಇದೆ. ಈ ರಸ್ತೆ ಆದರೆ ರಾಯಚೂರಿಗೆ ಇದು ಬಹಳ ಹತ್ತಿರವಾಗುತ್ತದೆ ಅಲ್ಲದೆ ಹೈದರಾಬಾದ್ ರಸ್ತೆಗೂ ಅನುಕೂಲವಾಗುತ್ತದೆ. ಅಲ್ಲಿ ೩ ಹೆವಿ ಇಂಜಿನಿಯರಿಂಗ್ ಕಾರ್ಖಾನೆಗಳಿವೆ. (ಎ. ಸಿ. ಸಿ. ಎ. ಬಿ. ವಿ. ಮತ್ತು ಪಾಡಿ ಸಿಮೆಂಟ್ ಕಾರ್ಖಾನೆ) ಇಲ್ಲಿ ನೂರಾರು ಟ್ರಕ್‌ಗಳು ಓಡಾಡುತ್ತಿರುತ್ತವೆ. ಆದ್ದರಿಂದ ಈ ಕೆಲಸ ನಾರ್ಮಲ್ ಗ್ರಾಂಟ್‌ನಿಂದ ಆಗುವುದಿಲ್ಲ. ಆದಕ್ಕೆ ಬದಲಾಗಿ ಸ್ಪೆಷಲ್ ಗ್ರಾಂಟನ್ನು ಮಂಜೂರು ಮಾಡಿ ೧೦೦ ಕಿ. ಮೀ. ರಸ್ತೆಯನ್ನು ದುರಸ್ತಿ ಮಾಡಿಸಿಕೊಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.-- ಇದಕ್ಕೆ ೪೫ ಲಕ್ಷ ರೂ. ಬೇಕಾಗುತ್ತದೆಂದು ನಾನು ಈಗಾಗಲೇ ಹೇಳಿದ್ದೇನೆ. ಸಿ. ಆರ್. ಐಲೋಕೇಷನ್ ಹಣವನ್ನು ಕೇಳಿದ್ದೇವೆ. ಅವರೂ ಕೊಡುತ್ತಾರೆಂದು ನಮಗೆ ನಂಬಿಕೆ ಇದೆ. ಏನಾದರೂ ಮಾಡಿ ಈ ಕೆಲಸವನ್ನು ಮಾಡಿಸಿಕೊಡುತ್ತೇವೆ.